ಬೀದರ್ ಜಿಲ್ಲೆಯ ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆ

೨೫೮. (ಬಿ) ಡಾ. ವಿಜಯಕುಮಾರ್ ಖಂಡ್ರೆ (ಭಾಲ್ಕಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಬೀದರ್ ಜಿಲ್ಲೆಯ ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆಯು ಯಾವ ಹಂತದಲ್ಲಿದೆ, ಮತ್ತು ಸದರಿ ಕಾರ್ಖಾನೆಯ ಪರವಾನಗಿ ಅವಧಿಯು ಶೀಘ್ರದಲ್ಲಿಯೇ ಮುಗಿಯುವುದರಲ್ಲಿರುವುದರಿಂದ ಅದರ ಸ್ಥಾಪನೆಗಾಗಿ ಸಂಬಂಧಪಟ್ಟವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಸಚಿವರು).—

ಕಾರ್ಖಾನೆಯನ್ನು ಸ್ಥಾಪಿಸುವ ನಿವೇಶನವನ್ನು ಬೀದರ್ ಜಿಲ್ಲೆಯ ಚಿಲ್ಲರಗಿಯಿಂದ ಇಮಾಮ್‌ಪುರಕ್ಕೆ ಬದಲಾಯಿಸಲಾಗಿದ್ದು ಇದಕ್ಕಾಗಿ ಭಾರತ ಸರ್ಕಾರವು ಇನ್ನೂ ಅನುಮತಿ ನೀಡ ಬೇಕಾಗಿದೆ. ರಾಜ್ಯ ಸರ್ಕಾರವು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ ಹಾಗೂ ಈ ವಿಷಯದ ಬಗ್ಗೆ ಭಾರತ ಸರ್ಕಾರದೊಡನೆ ವ್ಯವಹರಿಸುತ್ತಿದೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಮನವಿಗಳು

ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಮುಂದೂಡಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ನಾನು ಅನೇಕ ಗಮನ ಸೆಳೆಯುವ ಸೂಚನೆ ಗಳನ್ನು ಕಳುಹಿಸಿದ್ದೇನೆ. ಆದರಲ್ಲಿ ಮುಖ್ಯವಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಸರ್ಕಾರ ಮುಂದೂಡಿರುವ ನಿರ್ಧಾರ ಕೈಗೊಂಡಿದ್ದು ಪರಿಣಾಮಕಾರಿಯಾದುದಲ್ಲ. ಹೀಗೆ ಬೇಜವಾಬ್ದಾರಿ ಯಿಂದ ಚುನಾವಣೆಯನ್ನು ಪದೇ ಪದೇ ಮುಂದಕ್ಕೆ ಹಾಕತಕ್ಕದ್ದು ಸರಿಯಲ್ಲ. ಸರ್ಕಾರ ಯಾವಾಗ ಚುನಾವಣೆ ಮಾಡುತ್ತದೆನ್ನುವ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕು. ಚುನಾವಣೆಯನ್ನು ಪುನ: ಮುಂದೂಡಲಾಗುತ್ತದೆನ್ನುವ ಮಾತು ಹೊರಗಡೆ ಕೇಳಿಬರುತ್ತಿದೆ, ಏಪ್ರಿಲ್ ೨೯ನೇ ತಾರೀಖು ಚುನಾವಣೆಯನ್ನು ಮಾಡುತ್ತೇವೆಂದು ಇಲ್ಲಿ ಹೇಳುತ್ತಾರೆ. ಯಾವಾಗ ಚುನಾವಣೆಯನ್ನು ಮಾಡುತ್ತಾರೆ ಎಂಬುದನ್ನು ತಿಳಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ, ಇದು ಅತ್ಯಂತ ಗಂಭೀರವಾದ ಪ್ರಶ್ನೆ. ರಾಜ್ಯದಲ್ಲಿ ಅನೇಕ ಜನ ಚುನಾವಣೆಗೆ ನಿಂತಿದ್ದಾರೆ. ಚುನಾವಣೆ ಮುಂದಕ್ಕೆ ಹೋದರೆ ಅವರ ಪರಿಸ್ಥಿತಿ ಏನು ? ನಾಮಕರಣ ಗೊಂಡಿರುವವರು ಎಷ್ಟು ದಿವಸ ಪ್ರಚಾರ ಮಾಡಬೇಕು ? ಪ್ರಚಾರ ಮಾಡುವ ಸಲುವಾಗಿ ಅವರು ಹಿಂಬಾಲಕರನ್ನು ಇಟ್ಟುಕೊಂಡರೆ ಎಷ್ಟು ಹಣ ವ್ಯಯವಾಗುತ್ತದೆ ಎಂಬುದನ್ನು ಯೋಚನೆ ಮಾಡ ಬೇಕು. ಪ್ರಚಾರಕ್ಕೆ ಎಷ್ಟು ಹಣ ಖರ್ಚಾಗಿದೆ ಎಂಬುದು ನಿಮಗೆ ಗೊತ್ತಿದೆಯೆ ? ಆದ್ದರಿಂದ ಇಂತಹ ದಿವಸ ಚುನಾವಣೆಯನ್ನು ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ. ಇದು ಗಂಭೀರವಾದ ಪ್ರಶ್ನೆ. ಹೀಗೆ ಚುನಾವಣೆಯನ್ನು ಮುಂದೂಡತಕ್ಕದ್ದು ಸರಿಯಾದುದಲ್ಲ. ತಾವು ಯಾವಾಗ ಚುನಾವಣೆ ನಡೆಸುತ್ತೀರಿ ಎಂಬುದನ್ನು ಹೇಳಬೇಕು. ಯಾವಾಗ ಬೇಕಾದರೂ ನಡೆಸುತ್ತೇವೆಂದು ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್,—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ಮುನಿಸಿಪಾಲಿಟಿ ಚುನಾವಣೆಯ ಬಗ್ಗೆ ಕೇಳುತ್ತಿದ್ದಾರೆಂದು ಕಾಣುತ್ತದೆ. ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್ ಚುನಾವಣೆಗಳನ್ನು ಎರಡು ಸಾರಿ ಮುಂದೂಡಿದ್ದು ನಿಜ. ಆದರ ಬಗ್ಗೆ ಈಗಾಗಲೇ ಹೇಳಿದ್ದೇವೆ. ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳಿಗೆ ಏಪ್ರಿಲ್ ೨೯ರಂದು ಮತದಾನ ನಡೆಯುತ್ತದೆ. ನಾವು ಪೋಲಿಂಗ್ ಡೇಟ್ ಮಾತ್ರ ಮುಂದೂಡಿದ್ದೇವೆ. ಪೋಲಿಂಗ್ ಏಪ್ರಿಲ್ ೨೯ಕ್ಕೆ ನಡೆಯುತ್ತದೆ. ಪೋಲಿಂಗ್ ಡೇಟ್ ಪೋಸ್ಟ್‌ಪೋನ್ ಮಾಡುವುದಕ್ಕೆ ಅನೇಕ ಕಾರಣ ಗಳಿತ್ತು. ಆದ್ದರಿಂದ ಅದನ್ನು ಮುಂದೂಡಿದ್ದೇವೆ. ಏಪ್ರಿಲ್ ೨೯, ೧೯೯೦ರಂದು ಮತದಾನವಾಗುತ್ತದೆ, ಇದು ಸರ್ಕಾರದ ಸ್ಪಷ್ಟ ನಿಲುವು, ಇದರಲ್ಲಿ ಯಾವುದೇ ತರಹದ ಬದಲಾವಣೆ ಇಲ್ಲ.